# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಂ.ಸಿ. ವೇಣುಗೋಪಾಲ್ (ವಿಧಾನ ಸಭೆಯಿಂದ ಚುನಾಯಿತರಾದವರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | : | 1324 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಕೃಷಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 18-03-2020 |

| | | |
|---|---|---|
| ಅ | ರಾಜ್ಯದಲ್ಲಿರುವ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಬೋಧಕ, ಬೋಧಕೇತರ, ಹಣಕಾಸಿನ ಸೌಕರ್ಯ ಮತ್ತು ಸೇವಾ ನಿಯಮಕ್ಕೆ ಏಕರೂಪ (Common Statutes) ಕಾಯಿದೆ ನಿಯಮವನ್ನು ತರಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣವೇನು; | ರಾಜ್ಯದಲ್ಲಿರುವ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಬೋಧಕ, ಬೋಧಕೇತರ, ಹಣಕಾಸಿನ ಸೌಕರ್ಯ ಮತ್ತು ಸೇವಾ ನಿಯಮಕ್ಕೆ ಸಂಬಂಧಿಸಿದ ಏಕರೂಪ ಪರಿನಿಯಮ ರಚನೆಯ ಕುರಿತು ಈಗಾಗಲೇ ಹಲವು ಸುತ್ತಿನ ಸಭೆಗಳನ್ನು ನಡೆಸಿ ಕರಡನ್ನು ಅಂತಿಮಗೊಳಿಸಿ ಎಲ್ಲ ಕೃಷಿ ವಿಶ್ವವಿದ್ಯಾಲಯಗಳ ವ್ಯವಸ್ಥಾಪನಾ ಮಂಡಳಿಗಳ ಅನುಮೋದನೆ ಪಡೆಯಲಾಗಿದೆ. ಮುಂದುವರೆದು, ಸದರಿ ಕರಡು ಏಕರೂಪ ಪರಿನಿಯಮಕ್ಕೆ ಆರ್ಥಿಕ ಇಲಾಖೆ, ಸಿಆಸುಇ (ಸೇವಾ ನಿಯಮಗಳು) ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಗಳ ಸಹಮತಿ/ಅಭಿಪ್ರಾಯ ಕೋರಿ ಸಂಬಂಧಿಸಿದ ಇಲಾಖೆಗಳಿಗೆ ಕಳುಹಿಸಿಕೊಡಲಾಗಿದ್ದು, ಸಂಬಂಧಿಸಿದ ಇಲಾಖೆಗಳಿಂದ ಸಹಮತಿ ಸ್ವೀಕೃತವಾದ ನಂತರ ಅಧಿಸೂಚನೆ ಹೊರಡಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು.<br>ಏಕರೂಪ ಪರಿನಿಯಮ ರಚನೆಯ ಪ್ರಕ್ರಿಯೆಯು ಹಲವು ಇಲಾಖೆಗಳೊಂದಿಗೆ ಸಮಾಲೋಚಿಸುವ ಹಾಗೂ ಹಲವು ಹಂತದ ಚರ್ಚೆಯನ್ನೊಳಗೊಂಡಿರುವುದರಿಂದ ಹೆಚ್ಚಿನ ಸಮಯದ ಅಗತ್ಯವಿರುತ್ತದೆ.<br>Regarding framing common statutes which applies uniformly to all the Universities of Agricultural Sciences in Karnataka state, already many rounds of discussions, |

| | | |
|---|---|---|
| | | deliberations have been made and finally draft has been finalized and approval of Board of Management of all Universities of Agricultural Sciences has been obtained. Thereafter, the same draft has been sent to the Department of Finance, Personnel & Administative Reforms (services rules) and Department of Parliamantary Affaiars and Lagislation for concurrence/ opinion. Once the same is received the further process of issuance of notification will be done as per rules.<br>Since, the process involves consultation of many departments and needs a lot of delibereations/ discussions to finalize the draft, it needs much time. |
| ಆ | ಈ ಕಾಯಿದೆಯನ್ನು ಜಾರಿಗೊಳಿಸಲು ಬೇಕಾಗಿರುವ ಸಮಯವೆಷ್ಟು; | ಆರ್ಥಿಕ ಇಲಾಖೆ ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆ ಮತ್ತು ಸಿ.ಆಸು ಇ (ಸೇವಾ ನಿಯಮಗಳ) ಇಲಾಖೆಗಳ ಅಭಿಪ್ರಾಯ ಸ್ವೀಕೃತವಾದ ನಂತರ ಮಾನ್ಯ ಘನತೆವೆತ್ತ ರಾಜ್ಯಪಾಲರ ಅನುಮೋದನೆ ಪಡೆದು ಶೀಘ್ರವಾಗಿ ಜಾರಿಗೊಳಿಸಲಾಗುವುದು.<br>Once the concurrence/opinion of all the concerned Departments received, approval of the His Excellency the Governor of Karnataka will be obtained and notification will be issued as soon as posssible. |
| ಇ | ಕೃಷಿ ಇಲಾಖೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ 6ನೇ ಪರಿಷ್ಕೃತ ವೇತನವನ್ನು ಜಾರಿಗೊಳಿಸಲು ವಿಳಂಬ ಮಾಡಲು ಕಾರಣವೇನು; ಮತ್ತು ಜಾರಿಯಾಗಲು ಬೇಕಾಗಿರುವ ಸಮಯವೆಷ್ಟು? | ಕೃಷಿ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದು, ಅವರಿಗೆ ಮಾಸಿಕವಾಗಿ ಪರಿಶ್ರಮಧನ ನೀಡಲಾಗುತ್ತಿದೆ. ಹೊರಗುತ್ತಿಗೆ ಆಧಾರಿತ ಸಿಬ್ಬಂದಿಗೆ 6ನೇ ಪರಿಷ್ಕೃತ ವೇತನವು ಅನ್ವಯಿಸುವುದಿಲ್ಲ.<br>ಆತ್ಮ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಆತ್ಮ ಮಾರ್ಗಸೂಚಿ 2018ರನ್ವಯ ರಾಜ್ಯದಲ್ಲಿ ಅನುಷ್ಠಾನವಾಗುತ್ತಿದ್ದು, ಮಾರ್ಗಸೂಚಿಯನುಸಾರ ಗುತ್ತಿಗೆ ಆಧಾರಿತ ಸಿಬ್ಬಂದಿಗೆ 6ನೇ |

| | | |
|---|---|---|
| | | ಪರಿಷ್ಕೃತ ವೇತನವು ಅನ್ವಯಿಸುವುದಿಲ್ಲ ಮತ್ತು ಗುತ್ತಿಗೆ ಆಧಾರದ ಸಿಬ್ಬಂದಿಗೆ ಮಾರ್ಗಸೂಚಿ 2018ರನ್ವಯ ಮಾಸಿಕವಾಗಿ ಗೌರವಧನವನ್ನು ನೀಡಲಾಗುತ್ತಿದೆ.<br><br>ಮುಂದುವರೆದು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಅಧೀನ ಕಛೇರಿಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ 6ನೇ ವೇತನ ಆಯೋಗದ ಪರಿಷ್ಕೃತ ವೇತನವನ್ನು ಜಾರಿಗೊಳಿಸುವ ಪ್ರಸ್ತಾವನೆಯ ಬಗ್ಗೆ ಆರ್ಥಿಕ ಇಲಾಖೆಯ ಅಭಿಪ್ರಾಯ ಕೋರಲಾಗಿತ್ತು. ಸದರಿ ವಿಷಯದ ಕುರಿತು ಆರ್ಥಿಕ ಇಲಾಖೆಯು ದಿನಾಂಕ:11.03.2020ರಂದು ಕೆಲವು ಅಂಶಗಳ ಕುರಿತು ಮಾಹಿತಿ ಕೋರಿರುತ್ತದೆ. ಸದರಿ ಮಾಹಿತಿಯನ್ನು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇವರಿಂದ ಪಡೆಯಲು ಕ್ರಮವಹಿಸಲಾಗುತ್ತಿದೆ.<br><br>ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇವರಿಂದ ಮಾಹಿತಿ ಸ್ವೀಕೃತಗೊಂಡ ತಕ್ಷಣ ಪುನಃ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ, ಆರ್ಥಿಕ ಇಲಾಖೆಯ ಸಹಮತಿ/ಅಭಿಪ್ರಾಯ/ಅನುಮೋದನೆ ದೊರೆತ ತಕ್ಷಣ ಈ ವಿಷಯವನ್ನು ಶೀಘ್ರವಾಗಿ ನಿಯಮಾನುಸಾರ ಇತ್ಯರ್ಥಪಡಿಸಲಾಗುವುದು.<br><br>In Agriculture Department some employees have been taken from outsource and they are being paid monthly basis. 6th revised pay doesn't apply to them.<br><br>ATMA is a centrally sponsored scheme which is being implemented since 2018 in the Karnataka state.<br><br>As per the ATMA guidelines prescribed by Government of India, 6th revised pay doesn't apply to the contract employees. These employees are being paid monthly basis.<br><br>Further, Universities of Agricultural Sciences, Bengaluru has sent a proposal to the Government to implement |

| | | |
|---|---|---|
| | | the 6th revised pay to the employee working under the university on contract basis. The matter was referred to the Finance Department for concurrence/ opinion/approval. Finance Department has sought some informtion in this regard on 11.03.2020. The information is being obtained from Universities of Agricultural Sciences, Bengaluru. Once the information is received, the same will be sent to Finance Department.<br><br>Upon receipt of the concurrence/opinion/approval from Finance Department the matter will be finalized/resolved soon. |

ಸಂಖ್ಯೆ: AGRI-AUM/ 11/2020

(ಬಿ.ಸಿ. ಪಾಟೀಲ್) 16/3/2020

ಕೃಷಿ ಸಚಿವರು